## ನಿಮ್ಮೊಡನೆ

# ಮಹಿಳಾ ಸಬಲೀಕರಣ ಮನೆಯಿಂದಲೇ ಶುರುವಾಗಲಿ

ಶಿಕ್ಷಣ, ಉದ್ಯೋಗ, ಗಳಿಕೆ... ಈ ಎಲ್ಲದರಲ್ಲೂ ಮಹಿಳೆಯರು ಮುನ್ನಡೆ ಸಾಧಿಸಿದ್ದಾರೆ. ಆ ಗ್ರಾಫ್ ಮತ್ತೂ ಮುಂದಕ್ಕೆ ಹೋಗಬೇಕು. ಆದರೆ ಮನೆಯೊಳಗೆ ಮತ್ತೆ ಅದೇ ಚಾಕರಿ, ಹೊರೆ. ಹೊಸ ಬಗೆಯ ಒತ್ತಡಗಳು, ಶೋಷಣೆ.

ಇಷ್ಟವೊ ಕಷ್ಟವೊ ಬೇಕೊ ಬೇಡವೊ ಅಂತೂ ಆಧುನಿಕತೆಯನ್ನು ಎಲ್ಲರೂ ಬಾಚಿ ತಬ್ಬಿಕೊಂಡಿದ್ದೇವೆ. ನಮ್ಮ ನಡೆ–ನುಡಿ, ಹಾವ–ಭಾವ, ದಿರಿಸಿನ ಮೂಲಕ ಅದು ಪ್ರಕಟಗೊಳ್ಳುತ್ತಲೇ ಇರುತ್ತದೆ. ಹೀಗೆ ಪ್ರಕಟಗೊಳ್ಳುವ ರೀತಿ–ನೀತಿಗಳಲ್ಲಿ ನಿಜವೆಷ್ಟು, ಹುಸಿಯೆಷ್ಟು? ಅದರಲ್ಲೂ ಹೆಣ್ಣುಮಕ್ಕಳ ವಿಚಾರದಲ್ಲಿ ನಮ್ಮ ನಿಲುವುಗಳು ಎಷ್ಟರಮಟ್ಟಿಗೆ ಆಧುನಿಕವಾಗಿವೆ? ಅದರಲ್ಲಿ ಭಿನ್ನ–ಭೇದಗಳು ಇವೆಯೇ ಎಂದು ಕೇಳಿಕೊಂಡರೆ ಕಣ್ಣೆದುರು ವಿರೋಧಾಭಾಸಗಳೇ ಹಾದುಹೋಗುತ್ತವೆ.

ಈ ದ್ವಂದ್ವ, ಮನೆ ಮೊದಲುಗೊಂಡು ಶಾಸನಸಭೆಗಳವರೆಗೂ ವಿಸ್ತರಿಸಿದೆ. ನಮ್ಮ ಮನೆಯನ್ನು ನಿಜಾರ್ಥದಲ್ಲಿ ಮುನ್ನಡೆಸುವುದು ಮಹಿಳೆಯೇ. ಆದರೂ ನಿರ್ಣಯ ಕೈಗೊಳ್ಳುವ ನಿರ್ಣಾಯಕ ಹಂತದಲ್ಲಿ 'ನಿನಗೆ ಗೊತ್ತಾಗಲ್ಲ ಬಿಡು' ಎಂದು ಆಕೆಯ ಮಾತನ್ನು ನಯವಾಗಿ ಪಕ್ಕಕ್ಕೆ ಸರಿಸುತ್ತೇವೆ. ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಮೂಲಕ ಮಹಿಳೆಯರಿಗೆ ಸಮಪಾಲು ದೊರಕಿಸಿಕೊಡುವ ಇದೇ ನೇತಾರರು, ವಿಧಾನಸಭೆಗಳಲ್ಲಿ, ಲೋಕಸಭೆಯಲ್ಲಿ ಮೂರನೇ ಒಂದು ಭಾಗದಷ್ಟಾದರೂ ಮೀಸಲಾತಿ ಕಲ್ಪಿಸಿ ಎಂದರೆ ಅದಕ್ಕೆ ಇಲ್ಲಸಲ್ಲದ ತೊಡಕು ಸೃಷ್ಟಿಸುತ್ತಾರೆ.

ಮಹಿಳೆಯರಲ್ಲಿ ಆರ್ಥಿಕ ಭ್ರಷ್ಟತೆಯ ಪ್ರಮಾಣ ಅತ್ಯಂತ ಕಡಿಮೆ ಎಂಬುದು ಕೆಲವೊಂದು ಅಧ್ಯಯನಗಳಿಂದ ದೃಢಪಟ್ಟಿದೆ. ಮಹಾರಾಷ್ಟ್ರದಲ್ಲಿ ಮಹಿಳೆಯರೇ ಮುನ್ನಡೆಸಿದ ಹನ್ನೆರಡು ಪಂಚಾಯಿತಿಗಳ ಆಡಳಿತ ಕುರಿತ ಅಧ್ಯಯನದಲ್ಲಿಯೂ ಈ ಅಂಶ ಬೆಳಕಿಗೆ ಬಂದಿದೆ. ಸ್ತ್ರೀಶಕ್ತಿ ಸಂಘಗಳ ಯಶಸ್ಸಿನ ಕತೆಗಳೂ ಇದೇ ಅಂಶವನ್ನು ಸಾರಿ ಹೇಳುತ್ತವೆ. ಅಲ್ಲಿ ಸಾಲ ಮರುಪಾವತಿ ಪ್ರಮಾಣ ನೂರಕ್ಕೆ ನೂರರಷ್ಟು. ಖುಲ್ಲಂಖುಲ್ಲಾ ಭ್ರಷ್ಟರಾಗುವಷ್ಟು ಭಂಡತನ ಮಹಿಳೆಯರಲ್ಲಿ ಇಲ್ಲ ಎಂಬುದನ್ನು ಒಪ್ಪುತ್ತೇವೆಯಾದರೂ ಶಾಸನಸಭೆಗಳಿಗೆ ಪ್ರವೇಶಾವಕಾಶ ಮಾತ್ರ ನಿರಾಕರಿಸುತ್ತೇವೆ. ಭ್ರಷ್ಟಾಚಾರದ ವಿರುದ್ಧ ಬೀದಿಯಲ್ಲಿ ನಾಮಫಲಕ ಹಿಡಿದು ನಿಲ್ಲಲು ಬಿಡುವು ಇರುತ್ತದೆ. ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ ಪರ ಧ್ವನಿ ಎತ್ತಲು ಸಮಯ ಇರುವುದಿಲ್ಲ!

ಮನೆಯಲ್ಲಿ ಹೆಣ್ಣುಮಕ್ಕಳನ್ನು ಪ್ರೀತಿಯಿಂದ ಕಾಣುತ್ತೇವೆ. ಅವರಿಗೆ ಅಗತ್ಯ ಸೌಕರ್ಯಗಳನ್ನೂ ಕಲ್ಪಿಸುತ್ತೇವೆ. ಆದರೆ ನಮಗೆ ಗೊತ್ತಿಲ್ಲದಂತೆಯೇ ಅವರಲ್ಲಿ ಅಧೈರ್ಯ ತುಂಬುತ್ತೇವೆ. ಅದು ಬೇಡ, ಇದು ಬೇಡ ಅಂತ ಹೇಳುತ್ತಲೇ ಹಿಂಜರಿಕೆ ಸ್ವಭಾವ ರೂಢಿಸುತ್ತೇವೆ. ಇಲ್ಲಿ ನಮ್ಮ ಆಧುನಿಕತೆಯು ಡ್ರೆಸ್, ಮೇಕಪ್‌ಗಳಂತಹುವುಗಳಿಗಷ್ಟೇ ಸೀಮಿತವಾಗುತ್ತದೆ. ಹೆಣ್ಣಾಗಲೀ ಗಂಡಾಗಲೀ ಒಂದೇ ಮಗು ಸಾಕು ಎಂಬ ಬೀಜಮಂತ್ರಕ್ಕೆ ಅಂಟಿಕೊಂಡಿರುವ ದಂಪತಿಗಳೂ ಇದ್ದಾರೆ. ಹೆಣ್ಣನ್ನು ಭ್ರೂಣ ಹಂತದಲ್ಲೇ ಹೊಸಕಿಹಾಕುವ ನಿರ್ದಯಿಗಳೂ ಇದ್ದಾರೆ. ಅದರ ಪರಿಣಾಮವೇ ಲಿಂಗಾನುಪಾತದಲ್ಲಿ ಕುಸಿತ. ಇನ್ನು, ಅಸುರಕ್ಷತೆಯ ಭಾವ ಈಗಲೂ ಹಾಗೇ ಇದೆ. ಅದನ್ನು ಹೋಗಲಾಡಿಸಲಂತೂ ಆಗಿಲ್ಲ. ಮಹಿಳೆಯ ಮುನ್ನಡೆಗೆ ಇಂತಹ ಅಸುರಕ್ಷ ಭಾವವೇ ದೊಡ್ಡ ಮಟ್ಟದಲ್ಲಿ ತೊಡಕು ಎಂಬುದು ನಮ್ಮ ನೀತಿನಿರೂಪಕರಿಗೆ ಮನವರಿಕೆ ಆಗುವುದು ಎಂದೋ!?

ಶಿಕ್ಷಣ, ಉದ್ಯೋಗ, ಗಳಿಕೆ... ಈ ಎಲ್ಲದರಲ್ಲೂ ಮಹಿಳೆಯರು ಮುನ್ನಡೆ ಸಾಧಿಸಿದ್ದಾರೆ. ಆ ಗ್ರಾಫ್ ಮತ್ತೂ ಮುಂದಕ್ಕೆ ಹೋಗಬೇಕು. ಆದರೆ ಮನೆಯೊಳಗೆ ಮತ್ತೆ ಅದೇ ಚಾಕರಿ, ಹೊರೆ. ಹೊಸ ಬಗೆಯ ಒತ್ತಡಗಳು, ಶೋಷಣೆ. ಆ ಕೆಲಸಗಳನ್ನು ಹಂಚಿಕೊಳ್ಳುವ ಮನೋಭಾವ ಪುರುಷ ಮಹಾನುಭಾವರಲ್ಲಿ ಇನ್ನೂ ಮೊಳೆತಿಲ್ಲ. ಇದಕ್ಕೆ ಅಪವಾದ ಇರಬಹುದಾದರೂ ಅಡುಗೆಮನೆ ಕೆಲಸ ಬಹುಮಟ್ಟಿಗೆ ಈಗಲೂ ಮಹಿಳೆಯರಿಗೇ ಮೀಸಲು. ಆರ್ಥಿಕ ಬದಲಾವಣೆ ಪಡೆದಿರುವಷ್ಟು ವೇಗ, ಸಾಮಾಜಿಕ ಬದಲಾವಣೆ ಪಡೆದಿಲ್ಲದಿರುವುದೇ ಇದಕ್ಕೆ ಕಾರಣ.

ಆರ್ಥಿಕ ಸ್ವಾತಂತ್ರ್ಯವೇ ಮಹಿಳಾ ಸಬಲೀಕರಣ, ಸಮಾನತೆಯ ಅಸ್ತ್ರ ಎಂದು ಬಿಂಬಿಸಲಾಗಿತ್ತು. ಆರ್ಥಿಕ ವ್ಯವಹಾರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಅವಕಾಶ ದೊರೆತಿದೆ. ಆದರೆ ಗುರಿ ಸಾಧನೆಗೆ ಸಾಮಾಜಿಕ ಮನೋಭಾವ ಅಡ್ಡಿಯಾಗಿ ಪರಿಣಮಿಸಿದೆ. ಅದನ್ನು ಆಮೂಲಾಗ್ರವಾಗಿ ಬದಲಿಸುವ ಕೆಲಸ ಆಗಬೇಕಾಗಿದೆ. ಅದು ಮನೆಯಿಂದಲೇ ಶುರುವಾಗಬೇಕು. ಎಳವೆಯಿಂದಲೇ ರೂಢಿಸಬೇಕು. ಅದಕ್ಕೆ ಪ್ರತಿ ಮನೆಯೂ ಕೈಜೋಡಿಸಿದರೆ ಆಗ ಸಬಲೀಕರಣದ ಕನಸು ನಿಜವಾದ ಅರ್ಥದಲ್ಲಿ ಸಾಕಾರಗೊಳ್ಳುತ್ತದೆ.



ಈಶ್ವರ

■ ಎನ್. ಉದಯಕುಮಾರ್